ಶ್ರೀ ಆರ್. ಕೆಂಚಪ್ಪ.—(ಎ)ಗೆ ಉತ್ತರ ಸರಿಯಾಗಿ ಕಟ್ಟಡ ಖಾನಗಿ ವ್ಯಕ್ತಿಗೆ ಸೇರಿದೆ ಅಂತ ಸರಕಾರ ಒಪ್ಪಿಕೊಂಡಿದೆ. ಕಟ್ಟಡವನ್ನು ಸರಕಾರಕ್ಕೆ ಕೊಡುವಾಗ, ಖಾವಂದರವರು ಯಾವ ಕಂಡಿಷನ್ ಮೇಲೆ ಕೊಟ್ಟಿದ್ದಾರೆ?

†ಶ್ರೀ ಎಸ್. ಆರ್. ಕಂಠಿ.—ಯಾವ ಕಂಡೀಷನ್ನೂ ಹಾಕಿಲ್ಲ; ಹಾಗೆಯೇ ಕೊಟ್ಟಿದ್ದಾರೆ.

ಶ್ರೀ ಆರ್. ಕೆಂಚಪ್ಪ.—ಮುಫತ್ತಾಗಿ ಕೊಟ್ಟಿದ್ದಾರೊ, ತಾತ್ಕಾಲಿಕವಾಗಿ ಕೊಟ್ಟಿದ್ದಾರೊ?

ಶ್ರೀ ಎಸ್. ಆರ್. ಕಂಠಿ.—ಮುಫತ್ತಾಗಿ ಕೊಟ್ಟಿದ್ದಾರೆ. ಯಾವ ಕಂಡಿಷನ್ನೂ ಹಾಕಿಲ್ಲ. ಹಾಗೆಯೆ ಬಿಟ್ಟುಕೊಟ್ಟಿದ್ದಾರೆ.

ಶ್ರೀ ಆರ್. ಕೆಂಚಪ್ಪ.—ಮುಫತ್ತಾಗಿ ಕೊಟ್ಟಿದ್ದಾರೆಂಬುದಕ್ಕೆ ಯಾವ ಅಗ್ರೀಮೆಂಟ್ ಇದೆ? ಅದಕ್ಕೆ ಲಿಖಿತ ಮೂಲಕ ಕೊಟ್ಟಿರುವುದು ಏನಾದರೂ ಆಧಾರವಿದೆಯೆ ಸರಕಾರದವರಲ್ಲಿ?

ಶ್ರೀ ಎಸ್. ಆರ್. ಕಂಠಿ.—ಲಿಖಿತದಲ್ಲಲ್ಲ. 34 ವರ್ಷದಿಂದ ನಮ್ಮ ಕಂಟ್ರೋಲಿನಲ್ಲಿದೆ. ಡಿಪಾರ್ಟ್‌ಮೆಂಟಿನವರು ಟರೆದಿದ್ದಾರೆ: ಇದು ಮುಫತ್ತಾಗಿ ಕೊಟ್ಟಿದ್ದಾರೆ ಅಂತ. ಬಹಳ ದಿವಸದಿಂದ ಇದು ಹೀಗೆಯೆ ನಡೆಯುತ್ತಾ ಇದೆ.

ಶ್ರೀ ಆರ್. ಕೆಂಚಪ್ಪ.—ಈ ಕಟ್ಟಡ ಶಿಥಿಲವಾಗುತ್ತಾ ಇರುತ್ತದೆ. ಸರಕಾರದವರು ಮೇಂಟೇನ್ ಮಾಡದಿರುವುದರಿಂದ. ಖಾನಗಿ ಕಟ್ಟಡ ಬೇಕು ಅಂತ ಮುಂದೆ ಬಂದಲ್ಲಿ, ಅದನ್ನು ಖಾವಂದರವರಿಗೆ ಬಿಟ್ಟುಕೊಡುವುದಕ್ಕೆ ಸಿದ್ಧರಿದ್ದೀರ?

ಶ್ರೀ ಎಸ್. ಆರ್. ಕಂಠಿ.—ಕಟ್ಟಡ ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ. ದುರಸ್ತು ಮಾಡುವುದಕ್ಕೆ ಯೋಚನೆ ಮಾಡುತ್ತೇನೆ.

ಶ್ರೀ ಆರ್. ಕೆಂಚಪ್ಪ.—ಕಟ್ಟಡ ಬಿಟ್ಟುಕೊಡುವುದಕ್ಕೆ ಇಷ್ಟವಿದ್ದಿಲ್ಲ, ಅದಕ್ಕೆ ಕೊಡಬೇಕಾದ ಪರಿಹಾರದ ಮೊಬಲಗು ಕೊಡುವುದಕ್ಕೆ ಸರಕಾರ ಸಿದ್ಧವಿದೆಯೆ?

ಶ್ರೀ ಎಸ್. ಆರ್. ಕಂಠಿ.—ಪರಿಹಾರದ ಪ್ರಶ್ನೆಯೆ ಬರುವುದಿಲ್ಲ. 30 ವರ್ಷದಿಂದ ಅದು ನಮ್ಮ ಕೈನಲ್ಲಿದೆ. ಕಟ್ಟಡ ಶಿಥಿಲವಾಗುತ್ತಿದೆ, ಅದನ್ನು ಗವರ್ನಮೆಂಟಿನವರು ದುರಸ್ತು ಮಾಡುತ್ತಾರೆ.

ಶ್ರೀ ಆರ್. ಕೆಂಚಪ್ಪ.—ಅದು ಕೊಟ್ಟು 15 ವರ್ಷವಾಗಿದೆ ಅಂತ ಉತ್ತರ ಕೊಟ್ಟಿದ್ದೀರ?

ಶ್ರೀ ಎಸ್. ಆರ್. ಕಂಠಿ.—ಎಲ್ಲಿದೆ?

## Repairs to the Tanks in the Reserved Constituency of Bangalore South Taluk

*Q.—525- Sri D. MUNICHINNAPPA (Bangalore South).—

Will the Government be pleased to state :-

(*a*) the number and names of tanks in the reserved constituency of Bangalore South Taluk ;

(*b*) the amount spent for the last three years for effecting repairs to said tanks.

*A.—Sri ALUR HANUMANTHAPPA (Deputy Minister for Minor Irrigation).—

(*a*) *Vide* statement 'A' placed on the Table of the House.†

(*b*) *Vide* statement 'B' placed on the Table of the House. †

ಶ್ರೀ ಡಿ. ಮುನಿಚಿನ್ನಪ್ಪ.—ನಾನು ಒಂದು ಪ್ರಶ್ನೆ ಕಳುಹಿಸಿ ಸುಮಾರು ಒಂದೂವರೆ, 2 ವರ್ಷವಾಯಿತು, ಅದಕ್ಕೆ ಏನೂ ಉತ್ತರ ಬಂದಿಲ್ಲ.

ಉಪಾಧ್ಯಕ್ಷರು.—ಉಪ ಪ್ರಶ್ನೆಗಳನ್ನು ಕೇಳಿ.

ಶ್ರೀ ಡಿ. ಮುನಿಚಿನ್ನಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ 116 ಕೆರೆಗಳು ಎಂದು ಉತ್ತರ ಕೊಟ್ಟಿದ್ದೀರಿ. ಈ ಕೆರೆಗಳನ್ನೆಲ್ಲಾ ಯಾವಾಗ ರಿಪೇರಿ ಮಾಡಿಕೊಡುತ್ತೀರಿ?

†[Placed in the Mysore Legislature Library *vide* No. 11-L. A.† June July 1964

† ಶ್ರೀ ಆಲೂರು ಹನುಮಂತಪ್ಪ.—ಅವಶ್ಯಕ ಬಿದ್ದಾಗ, ಹಣ ಒದಗಿದಾಗ ಮಾಡುತ್ತೇವೆ.

ಶ್ರೀ ಡಿ. ಮುನಿಚಿನ್ನಪ್ಪ.—ಇವುಗಳಲ್ಲಿ ಎಷ್ಟು ಕೆರೆ ರಿಪೇರಿಯಾಗಿದೆ? ಈ ತಾಲ್ಲೂಕಿನಲ್ಲಿ ಒಂದು ಕೆರೆ ಅಸರೆ ಬಿಟ್ಟರೆ, ಬೇರೆ ಕೆರೆಗಳೇ ಇಲ್ಲ. ಆದ್ದರಿಂದ ಶೀಘ್ರವಾಗಿ ಈ ಕೆರೆಗಳ ರಿಪೇರಿ ಮಾಡುತ್ತೀರ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೆ ನುಮಾರು 48 ರಿಪೇರಿ ಕೆಲಸಗಳನ್ನು ಮಾಡಿದೆ. ಇನ್ನು ಯಾವುದಾದರೂ ಇದ್ದರೆ ಮಾಡುತ್ತೇವೆ.

ಶ್ರೀ ವಿ. ಎಂ. ದೇವ್.—ಅವಶ್ಯಕವಿದ್ದರೆ ರಿಪೇರಿ ಮಾಡುತ್ತೇವೆಂದು ಹೇಳಿದಿರಿ. ಅವಶ್ಯಕ ಏದೆಯೊ ಇಲ್ಲವೊ ಅನ್ನುವುದು ಹೇಗೆ ನಿರ್ಧರಿಸುವುದು?

ಶ್ರೀ ಆಲೂರು ಹನುಮಂತಪ್ಪ.—ಏನಾದರೂ ಬಂಡ್ ರಿಪೇರಿ ಮಾಡಬೇಕಾಗುತ್ತದೆ; ಸ್ಲೂಸ್ ರಿಪೇರಿ ಮಾಡಬೇಕಾಗುತ್ತದೆ. ವೇಸ್ಟ್‌ವೇರ್ ಆಗಬೇಕಾಗಿರುತ್ತೆ. ಕೆರೆ ಒಡೆದು ಹೋದಾಗ ರಿಪೇರಿ ಮಾಡಬೇಕಾಗುತ್ತದೆ. ವೇಸ್ಟ್‌ವೇರ್ ಆಗಬೇಕಾಗಿರುತ್ತೆ. ಕೆರೆ ಒಡೆದು ಹೋದಾಗ ರಿಪೇರಿಯಾಗ ಬೇಕಾಗುತ್ತದೆ. ಹೀಗೆ ಅವಶ್ಯಕ ಬಿದ್ದಾಗ ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇ ಗೌಡ.—ಚೇಬಲ್ ಮೇಲೆ ಇಟ್ಟಿರುವ ಸ್ಟೇಟುಮೆಂಟುಗಳಲ್ಲಿರುವ ಕೆರೆ ಗಳು ಮಾನ್ಸೂರ್ ಪ್ಲಾನಿನಲ್ಲಿ ಸೇರಿವೆಯೊ?

ಶ್ರೀ ಆಲೂರು ಹನುಮಂತಪ್ಪ.—ರೆಸ್ಟೊರೇಷನ್ ಆಗಬೇಕಾದಂಥವು ಸೇರಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ಕೊಟ್ಟ ಕೆರೆಗಳನ್ನು ಈ ಪಟ್ಟಿಯಲ್ಲಿ ತಂದಿದ್ದೀರಿ. ಈಗ ಆಹಾರ ಅಭಾವ ದೇಶದಲ್ಲಿ ಜಾಸ್ತಿಯಾಗಿರುವುದರಿಂದ, ಎಲ್ಲಾ ಕೆರೆಗಳ ರಿಪೇರಿ ಅವಶ್ಯಕವೆಂತ ಭಾವಿಸುತ್ತೀರೊ, ಅನಾವಶ್ಯಕ ಅಂತ ಭಾವಿಸುತ್ತೀರೊ?

ಶ್ರೀ ಆಲೂರು ಹನುಮಂತಪ್ಪ.—ಬೆಂಗಳೂರು ದಕ್ಷಿಣ ತಾಲ್ಲೂಕಿನ ಒಂದು ಕಾನ್ಸ್ಟಿಟ್ಯೂ ಯನ್ಸಿಯಲ್ಲಿರುವ ಕೆರೆಗಳು 116. ಅದರಲ್ಲಿ ಎಷ್ಟು ರಿಪೇರಿಯಾಗಬೇಕೆಂದು ಲಿಸ್ಟ್ ಮಾಡಿದ್ದೇವೆ, ಅವಶ್ಯಕ ಬಿದ್ದಾಗ ಮಾಡುತ್ತೇವೆ. ಬಾಕಿ ಕಡೆಗಳದ್ದು ಈಗ ಹೇಳಲಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಂಜೀವನಾಥ ಐಕಳ.—ಕೆರೆಗಳ ರಿಪೇರಿಯಂತೂ ಮಾಡಿಕೊಡುವುದಿಲ್ಲ. ಹೋಗಲು ಮುಚ್ಚುತ್ತೀರ! ಕೆಂಗೇರಿ ಹತ್ತಿರವಿರುವ ಒಂದು ಕೆರೆಯ ನೀರು ಕೆಟ್ಟುಹೋಗಿದೆ. ಅದನ್ನು ಫೀರ್ಡ್‌ಜಾನಲ್ಲಿಗೆ ಕೊಂಡೊಯ್ದು ರಿಪೇರಿ ಮಾಡುವ ವ್ಯವಸ್ಥೆ ಮಾಡುತ್ತೀರ! ಮುಚ್ಚುತ್ತೀರ!

ಶ್ರೀ ಆಲೂರು ಹನುಮಂತಪ್ಪ.—ಕೆರೆಯ ಅವಶ್ಯಕತೆ ಇಲ್ಲದಿದ್ದರೆ, ಮುಚ್ಚಲೇ ಬೇಕಾಗುತ್ತದೆ.

ಶ್ರೀ ಡಿ. ಮುನಿಚಿನ್ನಪ್ಪ.—ಈವಾಗ ತಾವು ಕೊಟ್ಟಿದ್ದೀರಲ್ಲ, ಆ ಲಿಸ್ಟಿನಲ್ಲಿ ಒಂದು ಕಾನ್‌ಸ್ಟಿಟ್ಯೂ ಯನ್ಸಿಯಲ್ಲಿ, ಎರಡು ಕಾನ್‌ಸ್ಟಿಟ್ಯೂಯನ್ಸಿ ಸೇರಿದೆ. ಅದರಲ್ಲಿ 25ನೇ ನಂಬರು ಲಿಂಗಮ್ಮನ ಕೆರೆ ರಿಪೇರಿ ಮಾಡಿದ್ದೇವೆಂದು ಹೇಳಿದ್ದೀರಿ; ಅದಕ್ಕೆ 1848 ರೂಪಾಯಿ ಖರ್ಚಾಗಿದೆ. 47ನೇ ನಂಬರಿನಲ್ಲಿ ರುವುದಕ್ಕೆ 94 ರೂಪಾಯಿ ರಿಪೇರಿಗೆ ಖರ್ಚು ಮಾಡಿದ್ದೀರ. 94 ರೂಪಾಯಿಗೆ ಇನ್ನೆಷ್ಟು ಮಟ್ಟಿಗೆ ಅನುಕೂಲವಾಗಬಹುದು ಅನ್ನುವುದನ್ನು ತಾವೆ ಊಹಿಸಿ. ಇದೇ ಕೆರೆಗೆ 2 ವರ್ಷದ ಹಿಂದೆಯೆ ಅರ್ಜಿ ಕೊಟ್ಟು ಒಂದು ತೂಬು ಹಾಕಬೇಕು, ನೀರು ವೇಸ್ಟ್ ಆಗುತ್ತಿದೆಯೆಂದು ಹೇಳಿದ್ದರೂ, ಇವತ್ತಿನ ವರೆಗೂ ಅದರ ರಿಪೇರಿ ಇಲ್ಲ. ಇದರಲ್ಲಿ ಮಾತ್ರ ಈರೀತಿ ಅಪ್ಪಣೆ ಕೊಟ್ಟರೆ ಅದು ಹೇಗೆ ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಅವಶ್ಯಕವಾಗಿ ಆಗಬೇಕಾಗಿರತಕ್ಕ ಕೆಲಸಗಳನ್ನೆಲ್ಲಾ ಮಾಡ ಬೇಕೆಂದು ಹೇಳಿದ್ದೇವೆ. ಜೊತೆಗೆ ಮೇನ್‌ಟೆನೆನ್ಸ್ ಫಂಡ್ ಅಂತ ಸಪರೇಟ್ ಆಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಈಗ ಖರ್ಚು ಮಾಡತಕ್ಕ ಮೇನ್‌ಟೆನೆನ್ಸ್ ಫಂಡ್ ಜೊತೆಗೆ ಇನ್ನೂ ಸ್ವಲ್ಪ ಹೆಚ್ಚು ಹಣ ಸೇರತಕ್ಕ ಸಂಭವ ಇದೆ. ಪ್ರತಿಯೊಂದು ಕೆರೆಯ ರಿಪೇರಿ ಕೆಲಸ ಮಾಡಬೇಕೆಂಬ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರ್ಕಾರ ಸಹ ಒಪ್ಪಿಕೊಂಡಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ರಿಪೇರಿ ಮಾಡದೆ ಈ ಲಿಸ್ಟ್‌ನ್ನು ತಮಗೆ ಕೊಟ್ಟಿದ್ದಾರೆ ಆದ್ದರಿಂದ ದಯವಾಡಿ ರಿಪೇರಿ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತೂಬು ರೀಪೇರಿಯಾಗಬೇಕೆಂದು ಶಾಸನ ಸಭಾ ಸದಸ್ಯರು ಅರ್ಜಿ ಕೊಟ್ಟು ಎರಡೂವರೆ ವರ್ಷವಾದರೂ ಮಾಡದೇ ಇದ್ದಮೇಲೆ ಇನ್ನು ಸಾಮಾನ್ಯ ಜನರು ಕೊಟ್ಟ ಅರ್ಜಿ ಮೇಲೆ ತೂಬು ರಿಪೇರಿಯಾಗಬೇಕಾದರೆ ಎಷ್ಟು ವರ್ಷ ಅಥವಾ ಎಷ್ಟು ದಿವಸವಾಗುತ್ತದೆ!

ಶ್ರೀ ಆಲೂರು ಹನುಮಂತಪ್ಪ.—ತೂಬು ರಿಪೇರಿ ಮಾಡಬೇಕೆಂದು ಅವರು ಅರ್ಜಿ ಕೊಟ್ಟಿದ್ದಾರೆ, ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೆವು, ಮಾಡಿದ್ದಾರೆ ಎಂದು ತಿಳಿದು ಕೊಂಡಿದ್ದೇನೆ, ಒಂದು ವೇಳೆ ಮಾಡದಿದ್ದರೆ ಏಕೆ ಮಾಡಲಿಲ್ಲ, ಕಾರಣವೇನು ಎಂದು ಅದನ್ನು ತಿಳಿದು ಕೊಳ್ಳುವವರೆಗೂ ಏನನ್ನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಎ. ಗೌಡ.—1868 ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತೀರಿ, ಒಂದು ಕಾನೂ ಖರ್ಚಾಗಿಲ್ಲ, ಅದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಡಿಸೋಣ.

ಶ್ರೀ ಡಿ. ಮುನಿಚನ್ನಪ್ಪ 300 ರೂಪಾಯಿನಿಂದ ಸಾವಿರದ ರೂಪಾಯಿಗಳವರೆಗೂ ಖರ್ಚು ಮಾಡಿರುವುದಾಗಿ ಲಿಸ್ಟ್ ಕೊಟ್ಟಿದ್ದೀರಿ. 500 ರೂಪಾಯಿನಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಈ ತಾಲ್ಲೂಕಿನಲ್ಲಿ ಕೆರೆ ಬಿಟ್ಟರೆ ನೀರಿಗೆ ಬೇರೆ ಯಾವ ಆಶ್ರಯವೂ ಇಲ್ಲ ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರುವ ಕೆರೆಗಳನ್ನು ರಿಪೇರಿ ಮಾಡಿಸಿ, ಮಣ್ಣು ಎತ್ತಿ ತೂಬು ಸರಿಮಾಡಿಸಲು ಜಾಗ್ರತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಡುತ್ತೇವೆ, ಯಾವುದಾದರೂ ಒಂದು ನಿರ್ದಿಷ್ಟವಾದ ವಿಷಯ ಹೇಳಿದರೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಯಾವುದೂ ಹೊಸ ಕೆಲಸ ಮಾಡಕೂಡದು ಎಂಬುದಾಗಿ ಚೀಫ್ ಇಂಜಿನಿಯರಿಗೆ ಹೊಸದಾಗಿ ಆದೇಶ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಸರ್ಕಾರದವರ ಗಮನಕ್ಕೆ ಬಂದಿದ್ದರೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಜನರಲ್ ಆಗಿ ಕೇಳಿದರೆ ಅದಕ್ಕೆ ಉತ್ತರ ಕೊಡಲಾರೆ, ಯಾವುದಾದರೂ ನಿರ್ದಿಷ್ಟವಾದ ಉದಾಹರಣೆ ಇದ್ದರೆ ಅದನ್ನು ತಿಳಿಸಿದರೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮುನಿಚನ್ನಪ್ಪನವರು ಎರಡೂವರೆ ವರ್ಷದ ಹಿಂದೆ ಕೊಟ್ಟಂಥ ಅರ್ಜಿಗೆ ಇವತ್ತಿನವರೆಗೂ ಯಾವ ಪರಿಹಾರವೂ ಆಗಿಲ್ಲ ಎಂದ ಮೇಲೆ ನಿಮ್ಮ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಾ ಇಲ್ಲವೇ ? ಯಾವ ಸೆಕ್ರೆಟರಿ ಕೂಡ ಹೋಗಲ್ಲ ಎಂದ ಹೇಳಿದರು, ಎಂದಮೇಲೆ ನಿಮ್ಮ ಅಧಿಕಾರಿಗಳು ಇವತ್ತಿನವರೆಗೂ ಆ ಕೆಲಸವನ್ನು ಮಾಡದೇ ಇರುವುದನ್ನು ನೋಡಿದರೆ ನಿಮ್ಮ ಮಾತಿಗೆ ತಿರಸ್ಕಾರ ಮಾಡಿದಂತಾಗಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಆ ಕೆರೆ ತೂಬಿನ ಬಗ್ಗೆ ಎಷ್ಟು ಆಗಿದೆಯೋ ಗೊತ್ತಿಲ್ಲ ವಿಚಾರ ಮಾಡುತ್ತೇನೆ.

ಶ್ರೀ ಡಿ. ಮುನಿಚನ್ನಪ್ಪ.—23ನೇ ಐಟಂ 9,996 ರೂಪಾಯಿಗಳನ್ನು ಹೆಂಗದರೂರು ಕೆರೆ ಫೀಡರ್ ಚಾನಲ್‌ಗೆ ಎಂದು ಕೊಟ್ಟಿದ್ದೀರಿ. ಒಂದೇ ದಿವಸದಲ್ಲಿ ಈ ಚಾನಲ್‌ನ ಏರಿ ಕಿತ್ತು ಹೋಗಿದೆ ಇದರ ವಿಚಾರದಲ್ಲಿ ಏನು ಕ್ರಮತೆಗೆದು ಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಈಗ ಹೇಳಿದ್ದೀರಿ ವಿಚಾರ ಮಾಡಿಸುತ್ತೇನೆ.

---

## Appointment of a Chairman for the Coffee Curing Works, Chickmagalur.

*Q.—187 Smt. B. L. SUBBAMMA (Chickmagalur).—

Will the Government be pleased to state.—

(a) whether it is a fact that the Chairman of the Coffee Curing Works, Chickmagalur, has tendered his resignation and if so, the reasons for the same;

(b) whether they have received any proposal to appoint a non-official as Chairman for the said Works;

(c) whether they intend to appoint an high officer as the Managing Director and Chairman of the said Works with a view to improve the administration ?

A.—Sri K. MALLAPPA (Minister for Industies and Commerce).—

(a) Yes. He resigned because he felt that as Chairman he would not effectively function without the powers of a Managing Director.

(b) No.

(c) The matter is under consideration.